**ದಿನಾಂಕ:17-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-ಪ್ರತಿವಾದಿಯ ಪರ ಶ್ರೀ.ಎನ್. ಎಸ್. ಎಸ್ , ವಕೀಲರಿಂದ:-**

08. ಪ್ರತಿವಾದಿಯು ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ದಿ.20-05-2020 ರಂದು ನಿಮ್ಮ ತಂದೆಯವರು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ತಂದೆಯು ಮೃತ ಪಟ್ಟ ಎರಡುವರೆ ವರ್ಷಗಳ ನಂತರ ಅಂದರೆ ದಿ.12-10-2022 ರಂದು ನೀವು ಈ ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ದಾವಾಸ್ವತ್ತಿನ ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನೀವು ಋಣಭಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

09. ನೀವು ನಿಮ್ಮ ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದಿಯು ಪ್ರತಿ ತಿಂಗಳಿಗೆ ರೂ. 30 ಸಾವಿರ ಬಾಡಿಗೆ ಹಣವನ್ನು ಅಪರಿಚಿತರಾದ ಟಿ.ಎನ್ ರಾಜಗೋಪಾಲ್ ರವರಿಗೆ ಪಾವತಿ ಮಾಡುತ್ತಿದ್ದಾರೆ ಎಂದು ಹೇಳುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಟಿ. ಎನ್ ರಾಜಗೋಪಾಲ್ ರವರು ನರಸೇಗೌಡ ಮತ್ತು ಜಯಮ್ಮನವರ ಮಗ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಟಿ. ಎನ್ ರಾಜಗೋಪಾಲ್ ರವರು ನನ್ನ ಸ್ವಂತ ತಮ್ಮನಾಗುತ್ತಾರೆ. ಟಿ. ಎನ್ ರಾಜಗೋಪಾಲ್ ರವರ ಬಗ್ಗೆ ನಾನು ನಿಪಿ-3 ರಲ್ಲಿ ಹೇಳಿರುತ್ತೇನೆ. ನಿಪಿ-3 ರಂತೆ ಪ್ರತಿವಾದಿಗೆ ನೋಟಿಸ್ ನ್ನು ಕಳುಹಿಸಿದ ಸಮಯದಲ್ಲಿ ನನಗೆ ಪ್ರತಿವಾದಿಯು ಪ್ರತಿ ತಿಂಗಳು ರೂ. 30 ಸಾವಿರವನ್ನು ಟಿ.

ಎನ್ ರಾಜಗೋಪಾಲ್ ರವರಿಗೆ ಬಾಡಿಗೆಯಾಗಿ ಪಾವತಿ ಮಾಡುತ್ತಿರುವ ಬಗ್ಗೆ ಮಾಹಿತಿ ಇತ್ತು. ನಿಪಿ-3 ರಂತೆ ಪ್ರತಿವಾದಿಗೆ ನೋಟಿಸ್ ನ್ನು ಕಳುಹಿಸುವ ಸಮಯದಲ್ಲಿ ಟಿ.ಎನ್ ರಾಜಗೋಪಾಲ್ ರವರಿಗೆ ನೋಟಿಸ್ ನ್ನು ನೀಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತಾನು ದಾವಾಸ್ವತ್ತಿನ ಮಾಲೀಕರು ಆಗಿದ್ದೇನೆ ಮತ್ತು ಆಗಾಗಿ ಅವರಿಗೆ ನೋಟಿಸ್ ನ್ನು ನೀಡಲಿಲ್ಲ ಎನ್ನುತ್ತಾರೆ. ಟಿ. ಎನ್ ರಾಜಗೋಪಾಲ್ ರವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಟಿ. ಎನ್ ರಾಜಗೋಪಾಲ್ ರವರು ದಾವಾಸ್ವತ್ತಿನ ಮಾಲೀಕರು ಆಗಿರುವುದಿಲ್ಲ, ಆಗಾಗಿ ಅವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎನ್ನುತ್ತಾರೆ.

10. ಪ್ರತಿವಾದಿಯು ತನ್ನ ಪ್ರತ್ಯುತ್ತರ ನೋಟಿಸ್ ನಲ್ಲಿ ನಿಮಗೆ ಬಾಡಿಗೆ ದಾರರು ಆಗಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮಗೂ ಮತ್ತು ದಾವಾಸ್ವತ್ತಿಗೂ ಯಾವುದೇ ರೀತಿಯ ಸಂಬಂಧ ಇಲ್ಲದೇ ಇರುವ ಕಾರಣ ಪ್ರತಿವಾದಿಯನ್ನು ಖಾಲಿ ಮಾಡಿ ದಾವಾಸ್ವತ್ತಿನ ಸ್ವಾಧೀನವನ್ನು ಕೋರುವಂತೆ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯು ನಿಮಗೆ ತಿಂಗಳಿಗೆ ರೂ. 30 ಸಾವಿರ ಬಾಡಿಗೆಯನ್ನು ಪಾವತಿ ಮಾಡಬೇಕು ಎಂಬುವುದು ಕೇವಲ ನಿಮ್ಮ ಕಲ್ಪನೆ ಆಗಿದೆ, ಆಗಾಗಿ ಅವರು ಇಲ್ಲಿಯವರೆಗೂ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಬಾಡಿಗೆ ಪಾವತಿ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ತಂದೆಯವರು ಪ್ರತಿವಾದಿಗೆ ಬಾಡಿಗೆಯನ್ನು ನೀಡಿದ ದಿನದಿಂದಲೂ ಮತ್ತು ಇಲ್ಲಿಯ ತನಕ ಎಲ್ಲಾ ಬಾಡಿಗೆಯನ್ನು ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನ್ನ ತಂದೆಗೆ ಬಾಡಿಗೆಯನ್ನು ಪಾವತಿ ಮಾಡಿದ್ದಾರೆ ಎನ್ನುತ್ತಾರೆ. ದಾವಾಸ್ವತ್ತು ನಿಮ್ಮ ಸ್ವಂತ ಬಳಕೆಗೆ ಬೇಕು

ಎಂಬುವುದು ನಿಮ್ಮ ದುರುದ್ದೇಶ ಆಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

11. ಪ್ರತಿವಾದಿ ಮತ್ತು ನಿಮ್ಮ ತಂದೆಯ ನಡುವೆ ಆಗಿದೆ ಮತ್ತು ಅದನ್ನು ರದ್ದು ಮಾಡಲಾಗಿದೆ ಎನ್ನುವ ಬಾಡಿಗೆ ಕರಾರುಪತ್ರವನ್ನು ಯಾವ ದಿನಾಂಕದಂದು ಎಷ್ಟು ಮೊತ್ತಕ್ಕೆ ಮಾಡಲಾಗಿರುತ್ತದೆ ಮತ್ತು ಸದರಿ ದಾಖಲೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರತಿವಾದಿ ಮತ್ತು ನನ್ನ ತಂದೆಯ ನಡುವೆ ಆಗಿರುವ ಬಾಡಿಗೆ ಕರಾರುಪತ್ರ ನನ್ನ ಬಳಿ ಇರುವುದಿಲ್ಲ. ಸದರಿ ಬಾಡಿಗೆ ಕರಾರುಪತ್ರ ನಿಮ್ಮ ಬಳಿ ಇಲ್ಲದೇ ಇದ್ದರೂ ನೀವು ಅದನ್ನು ಹೇಗೆ ರದ್ದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ವಾದಪತ್ರದಲ್ಲಿ ಹೇಳಿರುವ ವಿಷಯದ ಬಗ್ಗೆ ನಾನು ನನ್ನ ವಕೀಲರಿಗೆ ದಾಖಲೆಯನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಏನು ತೊಂದರೆ ಇದೆ ಎಂದರೆ ಸಾಕ್ಷಿಯು ಗೊತ್ತಾಗುವುದಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**